ಕರ್ನಾಟಕ ಸರ್ಕಾರ
Government of karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpl.dsert-ka@nic.in Website: http://dsert.kar.nic.in

Phone - 080 26980100
Fax - 080 26422377

ಡಿಎಸ್ಇಆರ್‌ಟಿ DSERT

**ಸಂಖ್ಯೆ:E-70384/DSERT/LIBR/OTH/2/2025** **ದಿನಾಂಕ:22-05-2026**

## ಜ್ಞಾಪನಾ

ವಿಷಯ : "ಮೊಬೈಲ್ ಬಿಡಿ – ಪುಸ್ತಕ ಹಿಡಿ" ಅರಿವಿನ ಅಭಿಯಾನ ಅನುಷ್ಠಾನಗೊಳಿಸುವ ಬಗ್ಗೆ.
ಉಲ್ಲೇಖ :1. ಸರ್ಕಾರದ ಸುತ್ತೋಲೆ ಸಂಖ್ಯೆ: ಇಪಿ 375 ಪಿಜಿಸಿ 2025 ದಿನಾಂಕ:28.01.2026.

****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ 2026-27ನೇ ಸಾಲಿನಲ್ಲಿ ರಾಜ್ಯಾದ್ಯಂತ ಸರ್ಕಾರದಿಂದ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು/ಪೋಷಕರು/ಸಾರ್ವಜನಿಕರಲ್ಲಿ ಓದುವ ಅಭಿರುಚಿ ಬೆಳಸಿ ಮೊಬೈಲ್ ಬಳಕೆ ನಿಯಂತ್ರಿಸುವ ಉದ್ದೇಶದಿಂದ **"ಮೊಬೈಲ್ ಬಿಡಿ – ಪುಸ್ತಕ ಹಿಡಿ"** ಅರಿವಿನ ಅಭಿಯಾನವನ್ನು ಅನುಷ್ಠಾನಗೊಳಿಸಿ ಜಾಗೃತಿ ಮೂಡಿಸಬೇಕಾಗಿದೆ. ಈ ಪತ್ರದೊಂದಿಗೆ ಲಗತ್ತಿಸಲಾಗಿರುವ ಸರ್ಕಾರದ ಸುತ್ತೋಲೆಯ ಅನ್ವಯ ಶಾಲೆಗಳ ಪ್ರಾರಂಭೋತ್ಸವದ ಜೊತೆಯಾಗಿಯೇ ಈ "ಮೊಬೈಲ್ ಬಿಡಿ – ಪುಸ್ತಕ ಹಿಡಿ" ಅಭಿಯಾನವನ್ನು ಹಮ್ಮಿಕೊಂಡು ಸಾಕಷ್ಟು ಪ್ರಚಾರ ನೀಡಬೇಕಾಗಿದೆ.

ಈ ಅಭಿಯಾನದ ಅನುಷ್ಠಾನ ಕ್ರಮಗಳಾಗಿ ಶಾಲಾ ಹಂತದಲ್ಲಿ SDMC/ಪೋಷಕರ ಸಭೆಗಳು, ಶಾಲೆಯಲ್ಲಿ ಓದುವ ಕಾರ್ಯಕ್ರಮಗಳ ಮುಖಾಂತರ ವಿದ್ಯಾರ್ಥಿ ಮತ್ತು ಪೋಷಕರಿಗೆ ಜಾಗೃತಿ ಮೂಡಿಸಬೇಕಾಗಿರುತ್ತದೆ. ಇತರೆ ಇಲಾಖೆಗಳಾದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಗ್ರಾಮ ಪಂಚಾಯತ್, ಗ್ರಂಥಾಲಯ ಮತ್ತು ಪೋಲೀಸ್ ಇಲಾಖೆಗಳ ಸಹಭಾಗಿತ್ವದಲ್ಲಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ, ಸಾರ್ವಜನಿಕರಿಗೆ, ಮೊಬೈಲ್ ವ್ಯಸನದ ದುಷ್ಪರಿಣಾಮಗಳ ಅರಿವು ಮೂಡಿಸುವುದು ಅತ್ಯಗತ್ಯವಾಗಿದ್ದು, ಈ ಬಗ್ಗೆ ಸರ್ಕಾರದ ಉಲ್ಲೇಖಿತ ಸುತ್ತೋಲೆಯು ವಿವರವಾದ ಅಂಶಗಳನ್ನು ಒಳಗೊಂಡಿರುತ್ತದೆ.

ಈ ಅಭಿಯಾನವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮೇಲ್ವಿಚಾರಣೆ ಮತ್ತು ಉಸ್ತುವಾರಿಗಾಗಿ ಪ್ರಾಥಮಿಕ , ಪ್ರೌಢಶಾಲೆ ಹಂತಗಳಲ್ಲಿ ನೋಡಲ್ ಅಧಿಕಾರಿಗಳನ್ನು ಗುರುತಿಸುವುದು. ಡಯಟ್ ನಿಂದ ಪ್ರಾಥಮಿಕ , ಪ್ರೌಢಶಾಲೆ ಹಂತಕ್ಕೆ ಗ್ರಂಥಪಾಲಕರನ್ನು ಉಪನಿರ್ದೇಶಕರು(ಆಡಳಿತ) ಕಛೇರಿಯಿಂದ ಡಿ.ವೈ.ಪಿ.ಸಿ ಅವರನ್ನು ನೋಡಲ್ ಅಧಿಕಾರಿಗಳಾಗಿ ಜಿಲ್ಲಾ ಹಂತದಲ್ಲಿ ನೇಮಿಸಿ ವಿವರ ಸಲ್ಲಿಸುವುದು. ಗುರುತಿಸಲಾದ ನೋಡಲ್ ಅಧಿಕಾರಿಗಳ ಪ್ರಮಾಣದ ಸಹಕಾರದಿಂದ ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು(ಆಡಳಿತ) ಮತ್ತು ಉಪನಿರ್ದೇಶಕರು(ಅಭಿವೃದ್ಧಿ) ಇವರು **ಸದರಿ ಸುತ್ತೋಲೆ ಮತ್ತು ನಮೂನೆ-1 ಮತ್ತು 2 ರ ಅನ್ವಯ** ಓದುವ ವಿವಿಧ ಚಟುವಟಿಕೆಗಳನ್ನು ಒಳಗೊಂಡಂತೆ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ತಮ್ಮ ವ್ಯಾಪ್ತಿಯ ಶಾಲೆ/ಸಂಸ್ಥೆಗಳಿಗೆ ಕಳುಹಿಸುವುದು. ಈ ಬಗ್ಗೆ ಅಗತ್ಯವಾದ ಸಲಹೆ, ಸೂಚನೆ, ಮಾರ್ಗದರ್ಶನಗಳನ್ನು ಪ್ರತಿ ತಾಲ್ಲೂಕು ಹಂತದಲ್ಲಿ ಶಾಲಾ ಬೆಂಬಲ ವ್ಯವಸ್ಥೆಗೆ ನೀಡಿ, ಶಾಲೆ, ಕ್ಲಸ್ಟರ್, ತಾಲ್ಲೂಕುಗಳಲ್ಲಿ **"ಮೊಬೈಲ್ ಬಿಡಿ – ಪುಸ್ತಕ ಹಿಡಿ"** ಅರಿವಿನ ಅಭಿಯಾನವು ಸಮರ್ಪಕವಾಗಿ ಅನುಷ್ಠಾನಗೊಳ್ಳುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು.

ಸಂಬಂಧಿಸಿದ ನೋಡಲ್ ಅಧಿಕಾರಿಗಳು ಸದರಿ ಅಭಿಯಾನಕ್ಕೆ ಸಂಬಂಧಿಸಿದಂತೆ ನಡೆಸಿದ ಕಾರ್ಯಕ್ರಮಗಳ ವಿವರ (ಭಾವಚಿತ್ರಗಳ ಸಮೇತ) ಹಾಗೂ ಪ್ರಗತಿ ವರದಿಯನ್ನು ಮಾಹೆಯಾನ ಕ್ರೋಢೀಕರಿಸಿ, ಪರಿಷ್ಕರಿಸಿ ಡಯಟ್ ನೋಡಲ್ ಅಧಿಕಾರಿ ಮುಖಾಂತರವೇ ರಾಜ್ಯ ಕಛೇರಿ **ಡಿ.ಎಸ್.ಇ.ಆರ್.ಟಿ** ಗೆ ಕಡ್ಡಾಯವಾಗಿ ಸಲ್ಲಿಸುವುದು. ಈ ಕಛೇರಿಯ ಇ- ಮೇಲ್ librarydsert.ka@gmail.com ಗೆ ಸಲ್ಲಿಸಲು ತಿಳಿಸಿದೆ.

ಜಿಲ್ಲೆ ತಾಲ್ಲೂಕು ಹಂತದ ಪ್ರಗತಿ ಮಾಹಿತಿಯ ಕ್ರೋಢೀಕರಣದ ಮಾದರಿ ನಮೂನೆಯನ್ನು ಈ ಪತ್ರಕ್ಕೆ ಅನುಬಂಧಿಸಿದೆ. ಸದರಿ ನಮೂನೆಯ ವಿವರದ ಕ್ರೋಢೀಕರಣ ಸುಲಭವಾಗಲು ಗೂಗಲ್ ಫಾರ್ಮ್ ತಯಾರಿಸಿ, ಸದರಿ ಗೂಗಲ್ ಲಿಂಕ್ ಅನ್ನು ಇ-ಮೇಲ್ ಮುಖಾಂತರ ಶೇರ್ ಮಾಡಲಾಗುವುದು.
(ಶಾಲಾ ಕಾಲೇಜುಗಳಲ್ಲಿ, ಸಾರ್ವಜನಿಕವಾಗಿ ಮತ್ತು ಇತರ ಸಂಸ್ಥೆಗಳಲ್ಲಿಯೂ ಕೈಗೊಂಡ ಕಾರ್ಯಕ್ರಮಗಳ ಒಟ್ಟಾರೆ ಕ್ರೋಢೀಕೃತ ವರದಿಯನ್ನು ಪ್ರತೀ ಮಾಹೆಯ ಅಂತ್ಯದಲ್ಲಿ ಜಿಲ್ಲಾ ಪ್ರತೀ ಡಯಟ್ ನ ವತಿಯಿಂದ ಅಂತಿಮ ಒಂದು ವರದಿಯನ್ನು ಮಾತ್ರ ಸಲ್ಲಿಸ ತಕ್ಕದ್ದು)

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ
ಬೆಂಗಳೂರು-85

ಗೆ,

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಮತ್ತು (ಅಭಿವೃದ್ಧಿ), ಶಾಲಾ ಶಿಕ್ಷಣ ಇಲಾಖೆ, ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ, ಇವರಿಗೆ ಉಪನಿರ್ದೇಶಕರು (ಆಡಳಿತ) ಇವರ ಮುಖಾಂತರ ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು ವಂದನೆಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.**

1. ಸರ್ಕಾರದ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಗೌರವಪೂರ್ವಕ ಮಾಹಿತಿಗಾಗಿ.
2. ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಗೌರವಪೂರ್ವಕ ಮಾಹಿತಿಗಾಗಿ.
3. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರುಗಿ ಇವರಿಗೆ ಮಾಹಿತಿಗಾಗಿ.
4. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ,ಬೆಂಗಳೂರು ಇವರಿಗೆ ಮಾಹಿತಿಗಾಗಿ.